**OS No.64/2018**
**PW.1**

<u>ದಿನಾಂಕಃ **05.01.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ</u>

ನಾನು ಎಸ್.ಎಸ್.ಎಲ್.ಸಿ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ವಾದ ಪತ್ರದಲ್ಲಿರುವ ಅಂಶಗಳನ್ನು ಓದಿ ತಿಳಿದುಕೊಂಡಿರುತ್ತೇನೆ. ವಾದ ಪತ್ರ ತಯಾರಿಸಲು ನಾನು ಮಾಹಿತಿ ಕೊಟ್ಟಿರುವುದಿಲ್ಲ. ಸಾಕ್ಷಿಯು ಮುಂದುವರೆದು ತೊಂದರೆಯಾಗಿರುತ್ತದೆ ಎಂದು ನಮ್ಮ ವಕೀಲರಿಗೆ ಮಾಹಿತಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಒಟ್ಟು 5 ಜನ ಸೇರಿ ತೀರ್ಮಾನಿಸಿ ದಾವೆ ಸಲ್ಲಿಸಿರುತ್ತೇವೆ. ನಾವು 5 ಜನ ಒಂದೇ ರಾಜಕೀಯ ಪಕ್ಷಕ್ಕೆ ಸೇರಿದವರಾಗಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಯವರ ಮೇಲೆ ರಾಜಕೀಯ ದ್ವೇಷ ಇತ್ತು ಎಂದರೆ ಸರಿಯಲ್ಲ. 2015 ರಲ್ಲಿ ಖಾತೆಯಾಗಿರುತ್ತದೆ. ಯಾವ ಆಧಾರದ ಮೇಲೆ ಖಾತೆಯಾಗಿರುತ್ತದೆ ಎಂದರೆ ನನಗೆ ಯಾವುದೇ ನಿವೇಶ ಇಲ್ಲದಿದ್ದರಿಂದ ಪಂಚಾಯಿತಿ ಆದೇಶದ ಮೇರೆಗೆ ಖಾತೆ ಮಾಡಿರುತ್ತಾರೆ.

ನನಗೆ 1 ಎಕರೆ ಒಟ್ಟು ಕುಟುಂಬದ ಆಸ್ತಿ ಇರುತ್ತದೆ. ದಾವಾಸ್ವತ್ತಿನ ಖಾತೆ ದೋಷಪೂರಿತ ಎಂದು ಕಾರ್ಯನಿರ್ವಾಹಕರು ವಜಾ ಮಾಡಿರುತ್ತಾರೆ ಎಂದರೆ ಸರಿ. ಸದರಿ ಆದೇಶದ ಮೇಲೆ ಮೇಲ್ಮನವಿ ಸಲ್ಲಿಸಿರುತ್ತೇನೆ. ಅದರ ಸಂಖ್ಯೆ ಗೊತ್ತಿಲ್ಲ. ಮೇಲ್ಮನವಿ ಸಲ್ಲಿಸಿರುವ ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ. ಆ ರೀತಿ ಮೇಲ್ಮನವಿ ಸಲ್ಲಿಸದೇ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ವಾಧೀನದಲ್ಲಿದ್ದೇನೆ ಎಂದು ತೋರಿಸಲು ಖಾತೆ ಹೊರತುಪಡಿಸಿ ಬೇರೆ ಯಾವುದೇ ದಾಖಲೆಗಳು ಇರುವುದಿಲ್ಲ. ದಾವಾಸ್ವತ್ತು ಸರ್ಕಾರಿ ಜಮೀನು ಆಗಿರುತ್ತದೆ ಎಂದರೆ ಸರಿ. ದಾವಾಸ್ವತ್ತು ನಿವೇಶನ ಮಾಡಲು ಯೋಗ್ಯವಾಗಿಲ್ಲ ಮತ್ತು ಮೂಲಸೌಕರ್ಯ ಇಲ್ಲ ಎಂದರೆ ಸರಿಯಲ್ಲ. ನಿ.ಪಿ-5 ರಲ್ಲಿ ಯಾವುದೇ ರಸ್ತೆ ಕಾಣಿಸುತ್ತಿಲ್ಲ ಎಂದರೆ ಸಾಕ್ಷಿ ನಮ್ಮ ನಿವೇಶನ ಇರುತ್ತದೆ ಎಂದು ನುಡಿಯುತ್ತಾರೆ. ಸರ್ಕಾರಿ ಜಮೀನಿಗೆ ಸಂಬಂಧಿಸಿದಂತೆ ಹಕ್ಕುದಾರಿಕೆಯನ್ನು ತಹಶೀಲ್ದಾರ್ ಅಥವಾ ಜಿಲ್ಲಾಧಿಕಾರಿಯವರು ನೀಡಬೇಕಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಪ್ರತಿವಾದಿಯವರು ದಾವಾಸ್ವತ್ತಿಗೆ 2018 ರಲ್ಲಿ ತೊಂದರೆ ಕೊಟ್ಟಿರುತ್ತಾರೆ. ದಿನಾಂಕ ಮತ್ತು ತಿಂಗಳು ನೆನಪಿಲ್ಲ. ದಾವಾಸ್ವತ್ತಿನ ಅಕ್ಕಪಕ್ಕ ಪ್ರತಿವಾದಿಯವರ ಆಸ್ತಿ ಇರುವುದಿಲ್ಲ ಎಂದರೆ ಸರಿ. ಪ್ರತಿವಾದಿ

ದಾವಾಸ್ವತ್ತಿಗೆ ತೊಂದರೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನಗೆ ಆಸ್ತಿ ಇದ್ದರೂ ಸರ್ಕಾರಿ ಜಮೀನನ್ನು ಕಬಳಿಸಲು ಪ್ರಯತ್ನ ಪಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದ ಪತ್ರದಲ್ಲಿ ನಮೂದಿಸಿರುವ ಚೆಕ್ಕುಬಂಧಿ ವಾಸ್ತವವಾಗಿ ಇಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಚೆಕ್ಕುಬಂಧಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಕೆಂಪಣ್ಣ, ಉತ್ತರಕ್ಕೆ ಮುನಿಯಮ್ಮ, ದಕ್ಷಿಣಕ್ಕೆ ಮಂಜುನಾಥ್. ದಾವಾಸ್ವತ್ತಿನ ಅಕ್ಕಪಕ್ಕದಲ್ಲಿರುವ ವ್ಯಕ್ತಿಗಳು ಸರ್ಕಾರಿ ಜಮೀನನ್ನು ಒತ್ತುವರಿ ಮಾಡಲು ಪ್ರಯತ್ನಿಸುತ್ತಿದ್ದಾರಾ ಎಂದರೆ ಸ್ವಾಧೀನದಲ್ಲಿದ್ದಾರೆಂದು ನುಡಿಯುತ್ತಾರೆ. ನಾನು ಸ್ವಾಧೀನದಲ್ಲಿ ಇಲ್ಲ ಮತ್ತು ಅಲ್ಲಿ ಯಾವುದೇ ನಿವೇಶನ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು 2018 ರಲ್ಲಿ ನಿವೇಶನ ಮಾಡಲು ಪ್ರಯತ್ನ ಪಟ್ಟಿರುತ್ತೇನೆ.

<u>ಮರುವಿಚಾರಣೆಃ</u> ಇಲ್ಲ

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ,**
ದೊಡ್ಡಬಳ್ಳಾಪುರ .